ಅ) 10,86,826 ಅರ್ಜಿಗಳು

ಆ) 1. 8,45,118 ಅರ್ಜಿಗಳು

2. 2.41, 708 (ಮಾರ್ಚ್ 98 ರವರೆಗೆ)

ಇ) ಉಳಿದಿರುವ ಅರ್ಜಿಗಳನ್ನು ಈ ವರ್ಷದ ಅಂತ್ಯದೊಳಗೆ ಶೀಘ್ರವಾಗಿ ವಿಲೇವಾರಿ ಮಾಡಲು ಸಮಿತಿಗಳಿಗೆ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ.

ಲಾಭದಲ್ಲಿ ನಡೆಯುತ್ತಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು.

2753: (3782)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪೈಕಿ ಎಷ್ಟು ಬ್ಯಾಂಕುಗಳು ಲಾಭದಲ್ಲಿ ನಡೆಯುತ್ತಿವೆ ಹಾಗೂ ಎಷ್ಟು ಬ್ಯಾಂಕುಗಳು ನಷ್ಟದಲ್ಲಿ ನಡೆಯುತ್ತಿವೆ. (ಲಾಭದಲ್ಲಿ ನಡೆಯುತ್ತಿರುವ ಬ್ಯಾಂಕುಗಳು ಈ ಹಣಕಾಸಿನ ವರ್ಷದಲ್ಲಿ ಗಳಿಸಿರುವ ಲಾಭ ವಿವರಗಳು ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಬ್ಯಾಂಕುಗಳು ಅನುಭವಿಸುತ್ತಿರುವ ನಷ್ಟದ ವಿವರಗಳನ್ನು ಜಿಲ್ಲಾವಾರು ಅಂಕಿಅಂಶಗಳಲ್ಲಿ ಒದಗಿಸುವುದು).

ಆ) ನಷ್ಟದಲ್ಲಿ ನಡೆಯುತ್ತಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಇತ್ತೀಚೆಗೆ ರಚನೆಯಾದ ಹೊಸ ಜಿಲ್ಲೆಗಳ ಪೈಕಿ ಎಷ್ಟು ಜಿಲ್ಲೆಗಳಲ್ಲಿ ಡಿ.ಸಿ.ಸಿ. ಬ್ಯಾಂಕುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. (ಅಂತಹ ಜಿಲ್ಲೆಗಳ ಹೆಸರು ಅಲ್ಲಿ ಸರ್ಕಾರ ತೊಡಗಿಸಿರುವ ಷೇರು ಬಂಡವಾಳದ ವಿವರಗಳನ್ನು ಒದಗಿಸುವುದು).

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):

ಅ) ರಾಜ್ಯದಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪೈಕಿ 14 ಲಾಭದಲ್ಲಿ ನಡೆಯುತ್ತಿದೆ ಹಾಗೂ 5 ನಷ್ಟ ಅನುಭವಿಸಿದೆ. (ವಿವರಗಳನ್ನು ಲಗತ್ತಿಸಲಾಗಿದೆ).

ಆ) ನಷ್ಟದಲ್ಲಿ ನಡೆಯುತ್ತಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಆರ್ಥಿಕ

ಪರಿಸ್ಥಿತಿಯನ್ನು ಉತ್ತಮಪಡಿಸಲು ಅಭಿವೃದ್ಧಿ ಕ್ರಿಯಾಯೋಜನೆಯನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ಠೇವಣಿ ಸಂಗ್ರಹಣೆ, ಕೃಷಿ ಮತ್ತು ಕೃಷಿಯೇತರ ಸಾಲ ನೀಡಿಕೆ ಹಾಗೂ ವಸೂಲಾತಿಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸುವ ಗುರಿ ಹಾಕಿಕೊಳ್ಳಲಾಗಿರುತ್ತದೆ. ಈ ಅಭಿವೃದ್ಧಿ ಕ್ರಿಯಾ ಯೋಜನೆಯ ಪ್ರಗತಿ ಪರಿಶೀಲನೆಗೆ ಸಂಬಂಧಿಸಿದಂತೆ ವಿಭಾಗೀಯ ಮಟ್ಟದ ಸಂಯುಕ್ತ ನಿಬಂಧಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಿದ್ದು ಪ್ರತಿ ತ್ರೈಮಾಸಿಕ ಪರಿಶೀಲನಾ ಕ್ರಮವಿಟ್ಟಿದೆ. ರಾಜ್ಯ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಅಭಿವೃದ್ಧಿ ಕ್ರಿಯಾ ಯೋಜನೆ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ರೂಪಿಸಿರುವ ವ್ಯಾಪಾರ ಅಭಿವೃದ್ಧಿ ಯೋಜನೆಯ ಪ್ರಗತಿ ಪರಿಶೀಲನಾ ಕ್ರಮವಿಡಲಾಗಿದೆ. ಜೊತೆಗೆ ಈ ಬ್ಯಾಂಕುಗಳಿಗೆ ಸರ್ಕಾರದಿಂದ ಷೇರು ಮತ್ತು ಅನುದಾನದ ರೂಪದಲ್ಲಿ ಆರ್ಥಿಕ ನೆರವು ನೀಡಲಾಗಿದೆ.

ಇ) ಇತ್ತೀಚೆಗೆ ರಚನೆಯಾದ ಹೊಸ ಜಿಲ್ಲೆಗಳ ಪೈಕಿ ನಾಲ್ಕು ಜಿಲ್ಲೆಗಳಲ್ಲಿ ಡಿ.ಸಿ.ಸಿ. ಬ್ಯಾಂಕುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ದಾವಣಗೆರೆ, ಹಾವೇರಿ, ಗದಗ್ ಮತ್ತು ಬಾಗಲಕೋಟೆ ಈ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಕ್ರಮ ಕೈಗೊಂಡಿದೆ. ಆರ್.ಬಿ.ಐ.ನ ಅನುಮತಿಯನ್ನು ನಿರೀಕ್ಷಿಸಿದ್ದು, ಸರ್ಕಾರದಿಂದ ಯಾವುದೇ ಷೇರು ಬಂಡವಾಳನ್ನು ತೊಡಗಿಸಿರುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಬ್ಯಾಂಕಿನ ಹೆಸರು	ಪ್ರಸಕ್ತ ಸಾಲಿನಲ್ಲಿ	
		ಲಾಭ	ನಷ್ಟ
1.	ಬೆಂಗಳೂರು	-	373.98
2.	ಕೋಲಾರ	-	52.85
3.	ಚಿತ್ರದುರ್ಗ	7.93	-
4.	ಶಿವಮೊಗ್ಗ	21.16	-
5.	ತುಮಕೂರು	-	131.83
6.	ಮೈಸೂರು	96.86	-
7.	ಮಂಡ್ಯ	80.79	-
8.	ಹಾಸನ	12.76	-
9.	ದಕ್ಷಿಣ ಕನ್ನಡ	155.00	-
10.	ಕೊಡಗು	197.38	-
11.	ಚಿಕ್ಕಮಗಳೂರು	127.93	-
12.	ಬೆಳಗಾಂ	251.17	-
13.	ಬಿಜಾಪುರ	218.22	-
14.	ಧಾರವಾಡ	28.72	-
15.	ಉತ್ತರ ಕನ್ನಡ	257.05	-
16.	ಗುಲ್ಬರ್ಗಾ	-	264.97
17.	ಬೀದರ್	18.30	-
18.	ರಾಯಚೂರು	-	103.58
19.	ಬಳ್ಳಾರಿ	2.20	-